# ದ್ರೌಪದಿಯ ಭಕ್ತಿ

ಸಂಗ್ರಹ : ಕೆ.ಎ. ಉಷಾ



ಭಗವಂತ ಭಕ್ತರ ಅಧೀನ ಎಂದಿದ್ದಾರೆ ದಾಸಶ್ರೇಷ್ಠರು. ಹಾಗಾದರೆ ನಾವು ಕರೆದರೆ ಏಕೆ ಬರಲೊಲ್ಲ? ನಮ್ಮ ಮೇಲೆ ಪರಮಾತ್ಮನಿಗೆ ಪ್ರೀತಿ ಇಲ್ಲವೆ? ಇದಕ್ಕೆ ಒಂದು ಕಥೆ ಇದೆ. ಶ್ರೀಕೃಷ್ಣನಿಗೆ ತಂಗಿ ಸುಭದ್ರೆಗಿಂತ ದ್ರೌಪದಿಯ ಮೇಲೇ ಹೆಚ್ಚು ಪ್ರೀತಿ ಎಂದು ಎಲ್ಲೋ ಕೇಳಿಸಿಕೊಂಡ ನಾರದರು ವಿಚಾರಿಸಲು ಕೃಷ್ಣನ ಹತ್ತಿರ ಹೋದರು.

ಕೃಷ್ಣ ನಾರದರ ಆಗಮನದ ಕಾರಣ ಕೇಳಿದ. ಆಗ ನಾರದರು "ಕೃಷ್ಣಾ, ನೀನು ಎಲ್ಲರಲ್ಲೂ ಸಮದೃಷ್ಟಿಯುಳ್ಳವನೆಂದು ನಿನ್ನನ್ನು ನಾನು ಜನರೆದುರು ಸ್ತುತಿಸುತ್ತಿರುತ್ತೇನೆ. ಆದರೆ ಕೆಲವರು ನಿನ್ನ ಬಗ್ಗೆ ಒಂದು ದೂರನ್ನು ಹೇಳುತ್ತಿದ್ದಾರೆ. ಒಡಹುಟ್ಟಿದ ತಂಗಿ ಸುಭದ್ರೆಗಿಂತ ದ್ರೌಪದಿಯ ಮೇಲೇ ಕೃಷ್ಣನಿಗೆ ಪ್ರೀತಿವಾತ್ಸಲ್ಯಗಳು ಜಾಸ್ತಿ ಎಂದು. ಇದಕ್ಕೆ ನಿನ್ನ ಉತ್ತರವೇನು ಎಂದು ತಿಳಿಯಲು ಬಂದೆ" ಎಂದರು.

ಕೃಷ್ಣ ನಾರದರಿಗೆ ಕೊಟ್ಟ ಉತ್ತರ ನಮಗೆಲ್ಲರಿಗೂ ಅನ್ವಯಿಸುವಂತಿದೆ. "ನಾರದಾ, ನಾನು ಎಳೆತವಿದ್ದಲ್ಲಿ ಹೋಗುವಂತಹವನು. ಯಾರ ಭಕ್ತಿಯ ಎಳೆ ಗಟ್ಟಿಯಾಗಿದೆಯೋ ಆ ಕಡೆ ಸೆಳೆಯಲ್ಪಡುತ್ತೇನೆ. ದ್ರೌಪದಿಯ ಎಳೆ ಗಟ್ಟಿಯಿರಬಹುದು. ಸುಭದ್ರೆಯ ಎಳೆ ದುರ್ಬಲವಿರಬಹುದು. ಇದನ್ನು ಪರೀಕ್ಷೆ ಮಾಡಿ ನೋಡಬೇಕಾದರೆ ನೀನು ಸುಭದ್ರೆಯ ಬಳಿ ಹೋಗಿ ಕೃಷ್ಣನ ಬೆರಳಿಗೆ ಗಾಯವಾಗಿದೆ, ಕಟ್ಟಲು ಬೇಗ ಒಂದು ತುಂಡು ಬಟ್ಟೆ ಕೊಡು ಎಂದು ಕೇಳು. ಕೊಟ್ಟರೆ ತೆಗೆದುಕೋ, ಇಲ್ಲದಿದ್ದರೆ ದ್ರೌಪದಿಯನ್ನು ಕೇಳು" ಎಂದ.

ಅದರಂತೆ ಸುಭದ್ರೆಯನ್ನು ನಾರದ ಬಟ್ಟೆಗಾಗಿ ಕೇಳಿದಾಗ ಅವಳು ಮನೆಯಲ್ಲೆಲ್ಲಾ ಹುಡುಕಾಡಿದಳು. ರೇಷ್ಮೆ ವಸ್ತ್ರಗಳ ನಡುವೆ ತುಂಡುಬಟ್ಟೆ ಎಲ್ಲಿಂದ ಹುಡುಕಲಿ ಎಂದು ಪೇಚಾಡಿದಳು. ಕಡೆಗೆ ನಾರದರು ದ್ರೌಪದಿಯ ಹತ್ತಿರ ಹೋದರು.

ಕೃಷ್ಣ, ಕೃಷ್ಣ ಎಂದು ಜಪಿಸುತ್ತಾ ಹೂಮಾಲೆ ಕಟ್ಟುತ್ತಿದ್ದ ದ್ರೌಪದಿ ಕೃಷ್ಣನಿಗೆ ಗಾಯವಾಗಿರುವ ಸುದ್ದಿ ಕೇಳುತ್ತಿದ್ದಂತೆ, "ನಿಜವೇ ನಾರದಾ, ಪಾಪ ಕೃಷ್ಣನಿಗೆ ಎಷ್ಟು ನೋವಾಗಿದೆಯೋ" ಎಂದು ಪರಿತಪಿಸುತ್ತಾ ತಕ್ಷಣ ಉಟ್ಟ ಪೀತಾಂಬರವನ್ನೇ ಹರಿದು ತುಂಡು ಮಾಡಿ ಕೊಟ್ಟು "ಬೇಗ ಹೋಗಿ ಕೃಷ್ಣನ ಬೆರಳಿಗೆ ಕಟ್ಟು" ಎಂದು ಹೇಳಿದಳು. ನಾರದನ ಪ್ರಶ್ನೆಗೆ ಉತ್ತರ ಸಿಕ್ಕಿತು. ◆